


ಗಣರಾಜ್ಯೋತ್ಸವದ ಟ್ಯಾಬ್ಲೊ

ಚಿತ್ರ ಕೃಪೆ: ಕರ್ನಾಟಕ ವಾರ್ತಾ ಇಲಾಖೆ

ದೋಚಿತು. ನಾವು ಪಾರ್ಕ್‌ಗಳ ಮರಗಳ ಬುಡ ಹುಡುಕಿದೆವು. ಕಾಫಿಯಿಲ್ಲದೆ ನಮ್ಮ ಚರ್ಚೆಗಳು ಕುಂದಿದವು.''

ಮೈಸೂರಿನಂತೆಯೇ ಬೆಂಗಳೂರಿನ ಮಹಾತ್ಮಾ ಗಾಂಧಿ ರಸ್ತೆಯಲ್ಲಿದ್ದ ಇಂಡಿಯನ್ ಕಾಫಿ ಹೌಸ್ ಖ್ಯಾತಿ ರಾಜ್ಯಕ್ಕೇ ಹರಡಿದೆ. ಕಲಾವಿದರು, ಪತ್ರಕರ್ತರು, ಸಾಹಿತಿಗಳು ಸಂಧಿಸುವ ಬಹುದೊಡ್ಡ ಕೇಂದ್ರ ಇದಾಗಿತ್ತು. ಕಾಫಿ ಹೌಸ್‌ನಂತೆಯೇ ಬೆಂಗಳೂರಿನ 'ಕೋಶಿಸ್' ಕೆಫೆಗೆ ಕೂಡ ಒಂದು ಸಾಂಸ್ಕೃತಿಕ ವರ್ಚಸ್ಸಿದೆ. ಇತಿಹಾಸಕಾರ ರಾಮಚಂದ್ರ ಗುಹಾ ಅವರಂಥ ಕನ್ನಡ ಮಾತನಾಡದ ಕನ್ನಡಿಗರ 'ಸಾಂಸ್ಕೃತಿಕ ಮಾತುಕತೆ'ಗೆ ಕೋಶಿಸ್ ಆಗಲೂ ಈಗಲೂ ವೇದಿಕೆ. ಕಾಫಿಗೂ ಕನ್ನಡ ಸಂಸ್ಕೃತಿಗೂ ಇರುವ ನಂಟನ್ನು ಗುರ್ತಿಸಿಯೇ ಪತ್ರಕರ್ತ ರವಿ ಬೆಳಗೆರೆ ತಮ್ಮ ಪುಸ್ತಕದ ಮಳಿಗೆಯನ್ನು 'ಬೆಳಗೆರೆ ಬುಕ್ಸ್ ಅಂಡ್ ಕಾಫಿ' (ಬಿಬಿಸಿ) ಎಂದು ಕರೆದಿದ್ದರು. ಹಾಗೆ ನೋಡಿದರೆ ಕರ್ನಾಟಕದ ಅನೇಕ ಊರುಗಳಲ್ಲಿ ಇರುವ ಕಾಫಿ ಹೋಟೆಲ್‌ಗಳು ಆಯಾ ಊರಿನ ರಾಜಕೀಯ– ಸಾಂಸ್ಕೃತಿಕ ಕೇಂದ್ರಗಳಾಗಿಯೇ ಈಗಲೂ ಗುರುತಿಸಿಕೊಳ್ಳುತ್ತಿವೆ.

ನಾಡಿನ ಕಾಫಿ ಚರಿತ್ರೆಯಲ್ಲಿ ಎಚ್.ಎಲ್. ನಾಗೇಗೌಡರ 'ಬೆಟ್ಟದಿಂದ ಬಟ್ಟಲಿಗೆ' ಕಾಫಿ ಕಥೆಯನ್ನು ಉಲ್ಲೇಖಿಸಬೇಕು. ಈ ಕೃತಿ, 2016ರ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪ್ರದರ್ಶನಗೊಂಡ 'ಕೊಡಗು: ಕಾಫಿ ನಾಡು' ಸ್ತಬ್ಧಚಿತ್ರಕ್ಕೆ ಪ್ರೇರಣೆಯಾಗಿತ್ತು. ನಾಗೇಗೌಡರ ಜನ್ಮಶತಮಾನೋತ್ಸವಕ್ಕೆ ನಾಡು ಸಲ್ಲಿಸಿದ ಗೌರವ ಆ ಸ್ತಬ್ಧಚಿತ್ರವಾಗಿತ್ತು.

ಸಿನಿಮಾ ಮಂದಿ ಕೂಡ ಕಾಫಿಯ ಪರಿಮಳಕ್ಕೆ ಮನಸೋಲದಿಲ್ಲ. ಟಿ.ಎನ್. ಸೀತಾರಾಮ್‌ರ ಸಿನಿಮಾ 'ಕಾಫಿ ತೋಟ', ವಿದ್ಯಾಸಾಗರ್ ನಿರ್ದೇಶನದ 'ಕಾಫಿ ವಿತ್ ಮೈ ವೈಫ್', ಪಿ.ಸಿ. ಶೇಖರ್ ನಿರ್ದೇಶನದ 'ಬೈ ಟೂ ಕಾಫಿ' ಚಿತ್ರಗಳು ಇದಕ್ಕೆ ಉದಾಹರಣೆ ಮಾತ್ರ. ಇನ್ನು ಕಾಫಿ ಬಟ್ಟಲು ಎದುರಿಗಿಲ್ಲದೆ ಚಿತ್ರಕಥೆ ರೂಪುಗೊಂಡೀತೆ?

ಸಾಹಿತ್ಯ–ಸಂಸ್ಕೃತಿಯ ಮಾತು ಬಿಡಿ; ನಮ್ಮ ದೈನಿಕದಲ್ಲಿ ಕಾಫಿ ಅದೆಷ್ಟು ನಾಜೂಕಾಗಿ ಬೆರೆತುಹೋಗಿದೆ ಎನ್ನುವುದನ್ನು ಗಮನಿಸಿದರೆ ಕಾಫಿಯ ದಿವ್ಯ ಪರಿಮಳಕ್ಕೆ ಒಡ್ಡಿಕೊಂಡ ಪುಲಕ ನಮ್ಮದಾಗುತ್ತದೆ. ಯೋಚಿಸಿ ನೋಡಿ: ಸಹಬಾಳ್ವೆಗೆ, ಸ್ನೇಹದ ಮುನ್ನುಡಿಗೆ, ಮನಸ್ಸಿನ ನಿರಾಳತೆಗೆ – ಕಾಫಿ ಅನೇಕ ರೂಪಗಳಲ್ಲಿ ಆಪ್ತವೆನ್ನಿಸುತ್ತದೆ. 'ಬೈ ಟು ಕಾಫಿ' ಎನ್ನುವ ಪರಿಕಲ್ಪನೆಯಲ್ಲಿ ಸಹಬಾಳ್ವೆ ಹಾಗೂ ಹಂಚಿಕೊಳ್ಳುವುದರಲ್ಲಿ ಇರುವ ಸುಖದ ಅನುಭೂತಿಯಿದೆ.

ಕಾಫಿ ಹೊಟ್ಟೆಯನ್ನು ತುಂಬಿಸುವುದಿಲ್ಲ, ಮನಸ್ಸನ್ನು ತುಂಬಿಸುತ್ತದೆ. 'ಅನ್ನ ತಿಂದು ದಿನ ಕಳೆದೆ' ಎಂದು ಯಾರಾದರೂ ಹೇಳಿದರೆ ಅದು ಏನನ್ನೂ ಹೇಳಿದಂತಾಗುವುದಿಲ್ಲ. ಆದರೆ, 'ಕಾಫಿ ಕುಡಿದು ದಿನ ಕಳೆದೆ' ಎನ್ನುವ ಮಾತು, ಬಡತನ ಅಥವಾ ಊಟ ಮಾಡಲು ಬಿಡುವಿಲ್ಲದಷ್ಟು ಒತ್ತಡ ಸೇರಿದಂತೆ ಏನೆಲ್ಲ ಕಥೆಗಳನ್ನು ಹೇಳುತ್ತದೆ.

'ಕಾಫಿ ಟೈಂ' ಎನ್ನುವುದು ಕಾಫಿಯ ಮೂಲಕ ರೂಪುಗೊಂಡಿರುವ ಮತ್ತೊಂದು ಜನಪ್ರಿಯ ಪರಿಕಲ್ಪನೆ. ಕಾಫಿಗೆ ಹೋಗುವುದೆಂದರೆ ಅದು ಹಗುರಾಗುವ ಕ್ರಿಯೆ – ಮನೆಯಾದರೂ ಅಷ್ಟೇ ಕಚೇರಿಯಾದರೂ ಅಷ್ಟೇ. ಕಾಫಿಯ ಸಮಯದಲ್ಲಿ ಕಷ್ಟಸುಖಗಳ ಚರ್ಚೆ ನಡೆಯುತ್ತದೆ. ಆ ಮೂಲಕ ಮಾನಸಿಕ–ದೈಹಿಕ ಒತ್ತಡಗಳು ಹಗುರಾಗುತ್ತವೆ. 'ಸಾಹೇಬರು ಕಾಫಿಗೆ ಹೋಗಿದ್ದಾರೆ' ಎನ್ನುವ ಮಾತಿಗೆ ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಬೇರೆಯದೇ ಅರ್ಥವಿದೆ. ಒಟ್ಟಿನಲ್ಲಿ 'ಈ ಸಮಯ ಕಾಫಿಮಯ' ಎನ್ನುವುದಕ್ಕೆ ಹತ್ತಾರು ಉದಾಹರಣೆ ಕೊಡಬಹುದು.

ಜನಮಾನಸದಲ್ಲಿ ಕಾಫಿಗಿರುವ ಆತ್ಮೀಯತೆ 'ಬನವಾಸಿ' ಬಳಗಕ್ಕೆ ಚೆನ್ನಾಗಿ ಅರ್ಥವಾದಂತಿದೆ. ಹೊಸ ತಲೆಮಾರಿನ ತರುಣ ತರುಣಿಯರಲ್ಲಿ ಕನ್ನಡ ನುಡಿಪ್ರೇಮವನ್ನು ಮೂಡಿಸಲು ಪ್ರಯತ್ನಿಸುತ್ತಿರುವ ಈ ಸಂಘಟನೆಯ ವಿಚಾರಗಳ ಅಭಿವ್ಯಕ್ತಿಯ ರೂಪದಲ್ಲಿ 'ಏನ್ ಗುರು, ಕಾಫಿ ಆಯ್ತಾ?' ಬ್ಲಾಗನ್ನು (enguru.blogspot.in) ನೋಡಬಹುದು. ಕಿರಣ್ ಬಾಟ್ನಿ ಅವರು ರೂಪಿಸಿದ ಈ ಬ್ಲಾಗ್, ಆನಂದ್ ಗುರು ಮೂಲಕ ತನ್ನ ಕವಲುಗಳನ್ನು ವಿಸ್ತರಿಸಿಕೊಂಡಿದೆ. 'ಏನ್ ಗುರು, ಕಾಫಿ ಆಯ್ತಾ?' ಹೆಸರಿನಲ್ಲಿ 'ಬನವಾಸಿ' ಗೆಳೆಯರು ಪುಸ್ತಕವೊಂದನ್ನು ಪ್ರಕಟಿಸಿದ್ದಾರೆ.

'ಕಾಫಿ ಕುಡಿಯದಿರುವವರನ್ನು ಯಾವ ಕಾರಣಕ್ಕೂ ನಂಬಬಾರದು' ಎನ್ನುವ ಲೇಖಕನೊಬ್ಬನ ಹೇಳಿಕೆಯನ್ನು ಕಾಫಿಯ ವಿಶ್ವರೂಪದ ಕುರಿತ ಒಳ್ಳೆಯ ಹೇಳಿಕೆಗಳಲ್ಲೊಂದು ಎನ್ನಬಹುದು. ಬೇರೆ ಬೇರೆ ಕಾರಣಗಳಿಗಾಗಿ ಕಾಫಿ ಕುಡಿಯದವರು ನಮ್ಮ ನಡುವೆಯಿದ್ದಾರೆ. ಅವರನ್ನೆಲ್ಲ ಸಾರಾಸಗಟಾಗಿ ನಂಬಿಕೆಗೆ ಅನರ್ಹ ಎನ್ನುವುದು ಬೀಸುಹೇಳಿಕೆಯಾದೀತು. ಆದರೆ, ಕಾಫಿಯ ಅನನ್ಯ ಅನುಭವವೊಂದಕ್ಕೆ ಎರವಾದ ಅವರು ಅನುಕಂಪಕ್ಕೆ ಅರ್ಹರು ಎನ್ನುವುದರಲ್ಲಂತೂ ಕಾಫಿಪ್ರಿಯರ ನಡುವೆ ಭಿನ್ನಾಭಿಪ್ರಾಯ ಇರದು.